


**ಕಳ್ಳ 1:** ಈ ಸರವನ್ನು ಪ್ರಾಣ ಹೋದರೂ ಕತ್ತಿಂದ ಮಾತ್ರ ತೆಗೆಯೋದಿಲ್ಲ ಅಂತ ಹೇಳ್ತಿದ್ದೆ ಅಲ್ವಾ? ಈಗೆಲ್ಲಿ ಅದು ಕಾಣಿಸ್ತಿಲ್ಲ?
**ಕಳ್ಳ 2:** ಕಷ್ಟಪಟ್ಟು ಕಳ್ಳತನ ಮಾಡಿದ್ದ ಆ ಸರವನ್ನು ಯಾವನೋ ಖತರ್‌ನಾಕ್ ಕಳ್ಳ ಕದ್ದುಬಿಟ್ಟವ್ನೆ.

**ಅಮ್ಮ:** ಮದುವೆ ಆಗಿ 13 ವರ್ಷವಾದರೂ ಇನ್ನೂ ಸರಿಯಾಗಿ ಅಡುಗೆ ಮಾಡೋಕೆ ಬರೋದಿಲ್ಲ. ಕಲಿತುಕೊಳ್ಳುವಂತೆ ನಿನ್ನ ಹೆಂಡತಿಗೆ ಗದರಬಾರದೇ?
**ಮಗ:** ನಾನೂ ಅದನ್ನೇ ಹೇಳಿದೆ ಅಮ್ಮ. ಅದ್ಕೆ ಅವಳು, 'ನಾನು ಅಡುಗೆ ಚೆನ್ನಾಗಿಯೇ ಮಾಡುತ್ತೇನೆ. ನಿಮ್ಮಮ್ಮನ ನಾಲಿಗೆಯಲ್ಲೇ ಸಮಸ್ಯೆ ಇದೆ. ಅದನ್ನು ಚೆಕ್ ಮಾಡಿಸು' ಅಂತ ಅಂದಳಮ್ಮ.

**ಗಂಡ:** ನಮ್ಮ ಅಕ್ಕ ತಂಗಿಯಂದಿರು ಪ್ರೀತಿಯಿಂದ ನನ್ನನ್ನು ನೋಡೋಕೆ ಬರ್ತಿದ್ದಾರೆ, ಏನಾದ್ರು ಸ್ವೀಟ್ ಮಾಡು.
**ಹೆಂಡತಿ:** ಪ್ರೀತಿ, ಗೀತಿ ಏನಿಲ್ಲ ಸುಮ್ಮನಿರಿ ಸಾಕು. ಇಷ್ಟು ದಿನ ಬರದೇ ಇದ್ದೋರು ಈಗ ಬರ್ತಿದ್ದಾರೆ ಅಂದ್ರೆ ಅದಕ್ಕೆ ಕಾರಣ ಬಸ್ ಟಿಕೆಟ್ ಫ್ರೀ ಆಗಿರೋದು.

**ಮಾಲೀಕ:** ಸೇಲ್ಸ್‌ಮ್ಯಾನ್ ಕೆಲಸಕ್ಕಿರುವ ಅನುಭವ ಏನು?
**ಹುಡುಗ:** ಅಮ್ಮನ ಒಡವೆ, ಅಪ್ಪನ ಬೈಕ್ ಅನ್ನು ಅವರಿಗೆ ಗೊತ್ತಿಲ್ಲದೆ ಮಾರಿದ್ದೇನೆ.

**ರಂಗ:** ನಿನ್ನ ಹೆಂಡತಿ ಟಿಫಿನ್ ಚೆನ್ನಾಗಿ ಮಾಡಿದ್ರೆ, ಮಧ್ಯಾಹ್ನದ ಊಟ ಚೆನ್ನಾಗಿ ಮಾಡೋದಿಲ್ಲ ಯಾಕೆ?
**ಗುಂಡ:** ಟಿಫಿನ್ ಅಂದ್ರೆ ಅವಳಿಗೆ ತುಂಬಾನೇ ಇಷ್ಟ. ಊಟ ಅಂದ್ರೆ ನಂಗಿಷ್ಟ ಅದ್ಕೆ.

**ಅಳಿಯ:** ಮದ್ವೆಯಾಗಿ 13 ವರ್ಷ ಆದ್ರೂ ನಿಮ್ಮ ಮಗಳಿಗೆ ಅಡುಗೆ ಮಾಡೋಕೆ ಬರುತ್ತಿಲ್ಲ. ಅವಳಿಗೆ ಅಡುಗೆ ಕಲಿಸೋಕೆ ಅತ್ತೆಗೆ ಹೇಳಿ ಮಾವ.
**ಮಾವ:** ಮದ್ವೆ ಆಗಿ 53 ವರ್ಷ ಆಯ್ತು. ನೀವೇಳಿದ ಮಾತನ್ನೇ ನಾನೂ ನಮ್ಮತ್ತೆಗೆ ಹೇಳ್ತಾ ಇದೀನಿ ಅಳಿಯಂದಿರೆ. ಏನೂ ಪ್ರಯೋಜನವಾಗ್ತಿಲ್ಲ.

**ರಂಗ:** ಕೇದಾರೇಶ್ವರನ ದರ್ಶನಕ್ಕೆ ನಡೆದುಕೊಂಡೇ ಹೋಗಿ ತುಂಬಾನೇ ಸುಸ್ತಾಯ್ತು.
**ಗುಂಡ:** ಯಾಕೆ ನಡೆದುಕೊಂಡು ಹೋದೆ, ಹೆಲಿಕಾಪ್ಟರ್‌ನಲ್ಲಿ ಹೋಗ್ಬೇಕಿತ್ತು.
**ರಂಗ:** ಪಕ್ಕದ ಬೀದೀಲಿ ಇರೋ ಕೇದಾರೇಶ್ವರ ದೇವಸ್ಥಾನಕ್ಕೆ ಹೆಲಿಕಾಪ್ಟರ್‌ನಲ್ಲಿ ಹೋಗೋಕೆ ಆಗುತ್ತಾ?

**ಅಪ್ಪ:** ಇಂದಿರಾಗಾಂಧಿ ಥರಾ ಹೇರ್‌ಕಟ್ ಯಾಕೆ ಮಾಡಿಸಿಕೊಂಡಿದ್ದೀಯಾ?
**ಮಗಳು:** ಅವರಂತೆ ನೀನೂ ಆಗಬೇಕು ಅಂತ ಹೇಳಿದ್ರಲ್ಲ ಅಪ್ಪ, ಅದ್ಕೆ ಹೀಗೆ ಹೇರ್‌ಕಟ್ ಮಾಡಿಸಿದೆ.

**ಜೈಲರ್:** ನಿನ್ನ ಕೊನೆ ಆಸೆ ಏನಾದ್ರೂ ಇದ್ರೆ ಈಗಲೇ ತಿಳಿಸು. ಇನ್ನೊಂದು ಗಂಟೆಯಲ್ಲಿ ನಿನ್ನನ್ನು ಗಲ್ಲಿಗೇರಿಸಲಾಗುತ್ತದೆ.
**ಕಳ್ಳ:** ದೇವರ ಮೇಲೆ ನನಗೆ ತುಂಬಾನೇ ನಂಬಿಕೆ. ಹೀಗಾಗಿ, ನನ್ನನ್ನು ದೇವರಿಗೆ ಮುಡಿಪಿಡುವ ಹೂವನ್ನು ಕಟ್ಟುವ ದಾರದಿಂದಲೇ ನೇಣಿಗೇರಿಸಿ.

**ಗಂಡ:** ಅಮ್ಮನಿಗೆ ಮಾತ್ರ ಬಿಸಿ ಬಿಸಿ ಸಾಂಬಾರು. ನಮಗ್ಯಾಕೆ ತಣ್ಣಗಿರೋ ಸಾಂಬಾರು?
**ಹೆಂಡ್ತಿ:** ಈ ಮನೆಯಲ್ಲಿ, ಹಳಸಿದ ವಾಸನೆ ಗೊತ್ತಾಗೋದು ನಿಮ್ಮಮ್ಮಂಗೆ ಮಾತ್ರ ಅದ್ಕೆ.

**ರಂಗ:** ಸ್ವಲ್ಪ ಹೊಗೆ ಬಂದ್ರೂ ಅಲಾರಂ ಹೊಡ್ಕೊಳ್ಳೊ ಸಿಸ್ಟಂ ನಿಮ್ಮ ಮನೆಯಲ್ಲಿ ಅಳವಡಿಸಿತ್ತಲ್ಲ, ಆದಾಗ್ಯೂ ನಿಮ್ ಮನೆ ಹತ್ಕೊಂಡು ಉರಿದ್ರೂ ಅಲಾರಂ ಹೊಡ್ಕೊಳ್ಳಲಿಲ್ಲವಲ್ಲ ಯಾಕೆ?
**ಗುಂಡ:** ಹೊಗೆ ಬರೋ ರೀತಿ ದಿನಾ ಹಾಲು ಉಕ್ಕಿಸಿ, ಪಾತ್ರೆ ಸೀದು ಹೋಗುವಂತೆ ಮಾಡ್ತಾ ಇದ್ದದ್ದಕ್ಕೆ ನನ್ನ ಹೆಂಡತಿಯನ್ನು ಬೈದಿದ್ದೆ. ಅದ್ಕೆ ಅವಳು ಆ ಅಲಾರಂ ಸಿಸ್ಟಂ ಅನ್ನೇ ಕಿತ್ತೆಸೆದಿದ್ದಳು. ಅದ್ರಿಂದಲೇ ಈ ಅನಾಹುತ ಸಂಭವಿಸಿದೆ.

**ಕ್ಲರ್ಕ್:** ಅಡುಗೆ ಮಾಡಿದ್ರೇನೆ ನನ್ನ ಹೆಂಡತಿ ನನ್ನನ್ನ ಆಫೀಸ್‌ಗೆ ಕಳಿಸೋದು. ಅದಕ್ಕೆ ಆಫೀಸ್‌ಗೆ ಬರೋದು ತಡವಾಯಿತು. ಅದಿರ್ಲಿ, ನೀವ್ಯಾಕೆ ನನಗಿಂತಲೂ ಲೇಟ್ ಆಗಿ ಆಫೀಸ್‌ಗೆ ಬರ್ತೀರಿ?
**ಬಾಸ್:** ನಿನ್ನ ಹೆಂಡತಿಯಾದರೂ ಪರವಾಗಿಲ್ಲ. ನನ್ನ ಹೆಂಡತಿ, ನಾನು ಅಡುಗೆ ಮಾಡಿ ಪಾತ್ರೆ ತೊಳೆದು ಬಟ್ಟೆಯನ್ನು ವಾಷಿಂಗ್ ಮಷಿನ್‌ಗೆ ಹಾಕಿದ್ ಮೇಲೆ ಆಫೀಸ್‌ಗೆ ಹೋಗಿ ಅಂತಾಳೆ. ಹೆಂಡತಿ ಮಾತಿಗೆ ಬೆಲೆಕೊಟ್ಟು ಎಲ್ಲ ಕೆಲಸ ಮುಗಿಸಿ ಆಫೀಸ್‌ಗೆ ಬರೋಕೆ ಇಷ್ಟೊತ್ತಾಗುತ್ತೆ.

**ಗುಂಡ:** ನಿನ್ನ ಹೆಂಡತಿ ಹೊಡಿತಾಳೆ ಅನ್ನೋದು ನನಗೂ ಗೊತ್ತಾಯ್ತು.
**ರಂಗ:** ಹೌದಾ... ಹೇಗೆ?
**ಗುಂಡ:** ಸಿನಿಮಾಗೆ ಬಾ ಅಂತ ಕರೆದೆ. ಅದಕ್ಕೆ ಅವಳು ಕೆನ್ನೆಗೆ ಎರಡ್ ಬಾರಿಸಿದ್ಳು.

ಸಂಗ್ರಹ: ಬಿ.ಆರ್. ಉಷಾ, ಬೆಂಗಳೂರು